

ಹುಡುಗ: ಮನೆ ಬಿಟ್ಟು ಓಡಿ ಬಾ. ನಾವು ಎಲ್ಲಾದರೂ ದೂರ ಹೋಗೋಣ

ಹುಡುಗಿ: ನನಗೆ ಒಬ್ಬಳೇ ಬರೋಕೆ ಭಯ ಆಗುತ್ತೆ.

ಹುಡುಗ: ಭಯ ಆದ್ರೆ ನಿನ್ನ ತಂಗೀನೂ ಕರ್ಕೊಂಡ್ ಬಾ

★★★

ಪ್ರಯಾಣಿಕ: ಅಮ್ಮನ ಕೃಪೆ ಅಂತ ಬರೆದಿದ್ದೀಯ? ಅಮ್ಮ ಅಂದರೆ ಅಷ್ಟು ಪ್ರೀತೀನಾ?

ಡ್ರೈವರ್: ಹಾಗೇನಿಲ್ಲ, ಅವಳ ಚಿನ್ನದ ಸರ ಮಾರಿ ಆಟೋ ತಗೊಂಡಿದ್ದು!

★★★

ಹೆಂಡತಿ: ರೀ! ಮಗಳು ಬೆಳೆದು ನಿಂತಿದ್ದಾಳೆ. ಬೇಗ ವರ ನೋಡಿ.

ಗಂಡ: ನನಗೂ ಆ ಜವಾಬ್ದಾರಿ ಇದೆ ಕಣೇ!

ಹೆಂಡತಿ: ಏನ್ ಜವಾಬ್ದಾರಿನೋ ಏನೋ? ವರ ನೋಡಿ ಬೇಗ.

ಗಂಡ: ಯೋಗ್ಯ ವರ ಎಲ್ಲಿ ಸಿಗ್ತಾನೆ ಹೇಳು?

ಹೆಂಡತಿ: ಅಯ್ಯೋ ನಮ್ಮಪ್ಪನೂ ನನಗೆ ಹಾಗೆ ವಿಚಾರ ಮಾಡಿದ್ರೆ ನನ್ನ ಮದುವೆ ಆಗ್ತಿತ್ತಾ?

★★★

ದೇವರು: ನಿನ್ನ ಭಕ್ತಿಗೆ ಮೆಚ್ಚಿದೆ. ಏನು ವರಬೇಕು ಕೇಳು?

ಭಕ್ತ: ಭಾರತದಿಂದ ಅಮೆರಿಕ್ಕೆ ಒಂದು ರಸ್ತೆ ಮಾಡಿ ಕೊಡು.

ದೇವರು: ಅದು ತುಂಬ ಕಷ್ಟ. ಬೇರೆ ಏನಾದ್ರೂ ಕೇಳು

ಭಕ್ತ: ಹಾಗಾದ್ರೆ 2 ಸಾವಿರ ರೂ. ನೋಟುಗಳ ಚಿಲ್ಲರೆ ಕೊಡಿಸು.

ದೇವರು: ಅಮೆರಿಕಕ್ಕೆ ಸಿಂಗಲ್ ರೋಡ್ ಬೇಕಾ ಇಲ್ಲ ಡಬ್ಬಲ್ ರೋಡಾ?

★★★

ನ್ಯಾಯಾಧೀಶ: ನಿನಗೆ ಎಪ್ಪತ್ತೈದು ವರ್ಷ. ಮಕ್ಕಳು, ಮೊಮ್ಮಕ್ಕಳು, ಮರಿ ಮಕ್ಕಳನ್ನು ಕಂಡಿದ್ದೀಯಾ! ಈ ವಯಸ್ಸಿನಲ್ಲಿ ಅತ್ಯಾಚಾರ ಮಾಡಲಿಕ್ಕೆ ನಾಚಿಕೆ ಆಗಲ್ವಾ?

ಆರೋಪಿ: ಬಿಡ್ತು ಅನ್ನಿ ಬುದ್ಧಿ, ನಾನು ಆ ಕೆಲಸ ಮಾಡಿದಾಗ ಮೂವತ್ತೈದು ವರ್ಷ. ಪ್ರಕರಣ ಈಗ ವಿಚಾರಣೆಗೆ ಬಂದೈತೆ.

★★★

ನ್ಯಾಯಾಧೀಶ: ಕಳೆದ ಬಾರಿ ಕಳ್ಳತನ ಮಾಡಿ ಜೈಲಿಗೆ ಸೇರಿದ್ದೆ. ಈಗಲೂ ಕಳ್ಳತನ ಮಾಡಿ ಜೈಲು ಸೇರಿದ್ದೀಯಾ?

ಆರೋಪಿ: ಏನ್ ಮಾಡೋದು ಬುದ್ಧಿ, ಬೇರೆ ಕಸಬು ಬರೋಲ್ಲ!

**(ಸಂಗ್ರಹ) ಕುಬೇರಪ್ಪ ಎಂ. ವಿಭೂತ**

---

ಉಪಾಧ್ಯಾಯರು: ಲೋ ಗುಂಡ ಯಾಕೋ ಲೆಕ್ಕದ ಪರೀಕ್ಷೆಯಲ್ಲಿ ನೆಲದ ಮೇಲೆ ಕುಳಿತುಕೊಂಡು ಬರೆಯುತ್ತಿದ್ದೀಯಾ?

ಗುಂಡ: ನೀವೇ ಹೇಳಿದ್ರಲ್ಲಾ ಸಾರ್! ಟೇಬಲ್ ಉಪಯೋಗಿಸಬಾರದು ಅಂತ.

★★★

ಗುಂಡ: ಲೇ, ಸಿನಿಮಾದ ಅಂತಿಮ ದೃಶ್ಯ ಹೃದಯಸ್ಪರ್ಶಿಯಾಗಿತ್ತು. ನಂಗಂತೂ ಅಳು ತಡೆಯೋಕೆ ಆಗಲಿಲ್ಲ. ನಿಂಗೆ ಅಳು ಬರಲಿಲ್ಲವಾ?

ಹೆಂಡತಿ: ನಂಗೂ ಅಳು ಬಂತೂರಿ! ಆದರೆ ಮೇಕಪ್ ಹಾಳಾಗಿ ಬಿಡುತ್ತದೇಂತ ಅಳಲಿಲ್ಲ ಅಷ್ಟೆ.

★★★

ಅಧಿಕಾರಿ: ನಿಮ್ಮ ಯಜಮಾನರು ತೀರಿಕೊಂಡು ಎಷ್ಟು ವರ್ಷವಾಯಿತು?

ರಾಧಾ: ಹತ್ತು ವರ್ಷ.

ಅಧಿಕಾರಿ: ಮತ್ತೆ ನಿಮ್ಮ ಕೊನೆಯ ಮಗನಿಗೆ 4 ವರ್ಷ ಅಂತ ಹೇಳ್ತೀರಲ್ಲ, ಅದು ಹೇಗೆ?

ರಾಧಾ: ತೀರಿ ಕೊಂಡದ್ದು ನಮ್ಮ ಯಜಮಾನರು, ನಾನಲ್ಲವಲ್ಲ.

**(ಸಂಗ್ರಹ) ಎಂ.ಕೆ. ಮಂಜುನಾಥ್**




ಶ್ರೀ ಪಂಚಮುಖಿ ಜ್ಯೋತಿಷ್ಯಂ

INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಮೈಸೂರಿನಲ್ಲಿಯೂ ಲಭ್ಯವಿರುತ್ತಾರೆ

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಬೆಂಗಳೂರು ಮೈಸೂರು 9880444450

